**6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.296/2018**

**(ಪ್ರಾ.ಸಾ.1 / ಚಾ.ಸಾ.3)**

ತಾಃ 08-08-2019 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಸಿ.ಆರ್.ವೆಂಕಟೇಶ್ |
| ತಂದೆಯ ಹೆಸರು | ಃ | ರಾಜಪ್ಪ |
| ವಯಸ್ಸು | ಃ | 24 ವರ್ಷ |
| ಉದ್ಯೋಗ | ಃ | ಚಾಲಕ |
| ವಾಸ ಸ್ಥಳ | ಃ | ಚಿಕ್ಕಕೊಂಡನಹಳ್ಳಿ |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿಲ್ಲ. ಹಿಂಡಿಗನಾಳ ಕ್ರಾಸ್ ನಮ್ಮ ಊರ ಹತ್ತಿರ ಇದೆ. ಕವಿತಾಳ ಡಾಬಾ ಸಹ ಹೆಚ್ ಕ್ರಾಸ್ ಹತ್ತಿರ ಇದೆ. ಚಾಸಾ-1 ಮತ್ತು 6 ರ ಪರಿಚಯ ಇರುವುದಿಲ್ಲ. ಮೃತ ಕವಿತಾಳ ಪರಿಚಯ ಇಲ್ಲ. ಚಾಸಾ-2 ಮತ್ತು 8 ರವರ ಪರಿಚಯ ಇರುವುದಿಲ್ಲ. ಕವಿತಾ ಏನು ಆಗಿದ್ದಾಳೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರ ಮೇಲೆ ಯಾವ ಪ್ರಕರಣ ಇದೆ ಗೊತ್ತಿಲ್ಲ. ನಂದಗುಡಿ ಪೋಲಿಸರು ಈ ಪ್ರಕರಣದ ಬಗ್ಗೆ ವಿಚಾರಿಸಿರುವುದಿಲ್ಲ ಹಾಗೂ ಹೇಳಿಕೆಯನ್ನು ಪಡೆದಿಲ್ಲ. ಪ್ರಕರಣದ ಕುರಿತು ಮಾಹಿತಿ ಇಲ್ಲ. ಪೋಲಿಸರು ಬಂದು ನೋಟೀಸ್ ನೀಡಿದ್ದಕ್ಕೆ ಬಂದಿದ್ದೇನೆ. ಯಾವುದೇ ವಿಚಾರವನ್ನು ಪೋಲಿಸರು ಹೇಳಿಲ್ಲ ನಾನು ಕೇಳಿ ತಿಳಿದುಕೊಂಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯ ಕಲಂ.161 ರ ಅಡಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ-**

ದಿನಾಂಕ 17-11-2017 ರಂದು ಸಾಯಂಕಾಲ 5-40 ಗಂಟೆ ಸಮಯದಲ್ಲಿ ನಾನು ತರಕಾರಿ ತೆಗೆದುಕೊಂಡು ಮೋಟಾರ್ ಸೈಕಲ್‌ನಲ್ಲಿ ಹೆಚ್ ಕ್ರಾಸ್‌ನಿಂದ ಊರಿಗೆ ಹೋಗುತ್ತಿದ್ದಾಗ ಕವಿತಾ ಡಾಬಾದ ಬಳಿ ದೇವಶೆಟ್ಟಹಳ್ಳಿಯ ನಾರಾಯಣಪ್ಪ ಮತ್ತು ಕಲ್ಲಹಳ್ಳಿಯ ಕೇಶವ ಮೂರ್ತಿ ಚಿಕ್ಕಕೊಂಡಹಳ್ಳಿಯ ವಿನಾಯಕ, ಕೃಷ್ಣಪ್ಪ, ವಿಜಯಕುಮಾರ್ ಮತ್ತು ಯಶವಂತಪುರ ನಾರಾಯಣಸ್ವಾಮಿ ನಿಂತುಕೊಂಡು ಇಂದು ಏನೇ ಆಗಲಿ ಒಂದು ಗತಿ ಕಾಣಿಸಬೇಕು ಎಂದು ಮಾತನಾಡುತ್ತಿದ್ದರು ನಾನು ಏನಿರಬಹುದು ಎಂದು ರಸ್ತೆಯ ಅಂಚಿನಲ್ಲಿ ಮೋಟಾರ್ ಸೈಕಲ್ ನಿಲ್ಲಿಸಿ ಸ್ವಲ್ಪ ಸಮಯದ ನಂತರ ವಿಜಯಕುಮಾರ್ ಹೆಚ್ ಕ್ರಾಸ್ ಕಡೆಗೆ ಹೊರಟು ಹೋದನು ನಂತರ ನಾರಾಯಣಪ್ಪನ ಸಂಬಂಧಿ ಮಧುಕುಮಾರ್ ಒಂದು ಟಾಟಾ ಏ.ಸಿ. ವಾಹನವನ್ನು ತೆಗೆದುಕೊಂಡು ಬಂದನು. ಮೇಲೆ ಹೇಳಿದ ವ್ಯಕ್ತಿಗಳು ಡಾಬಾದ ಒಳಗೆ ಪ್ರವೇಶ ಮಾಡಿ ಡಾಬಾದಲ್ಲಿ ಇದ್ದ ಎರಡು ಫ್ರಿಡ್ಜ್‌ಗಳನ್ನು ತೆಗೆದುಕೊಳ್ಳುವಾಗ ಅಲ್ಲಿ ಕೆಲಸ ಮಾಡುತ್ತಿದ್ದ ಗಜೇಂದ್ರ ರಮೇಶನ ಸಂಬಂಧಿ ಲೋಕೇಶ್‌ನನ್ನು ಕರೆದುಕೊಂಡು ಬಂದನು ಲೋಕೇಶ್ ಬಂದು ಏಕೆ ಈ ರೀತಿ ಒಳಗೆ ನುಗ್ಗಿ ಡಾಬಾದಲ್ಲಿ ಇದ್ದ ಸಾಮಾನುಗಳನ್ನು ತೆಗೆದುಕೊಳ್ಳುತ್ತಿದ್ದೀರಿ ಎಂದು ಕೇಳಿದನು, ಅದಕ್ಕೆ ನಾರಾಯಣಪ್ಪ ನಮ್ಮ ಸಾಮಾನುಗಳನ್ನು ನಾವು ತುಂಬಿಕೊಳ್ಳುತ್ತಿದ್ದೇವೆ ಎಂದು ಹೇಳಿ ಅಡ್ಡಿಪಡಿಸಲು ಬಂದ ಗಜೇಂದ್ರನಿಗೆ ಆರೋಪಿ ವಿನಾಯಕ್ ಕೈಗಳಿಂದ ಮುಖಕ್ಕೆ ಹಾಗೂ ತಲೆಗೆ ಹೊಡೆದನು, ನಂತರ ಅವನು ಹೊರಟು ಹೋದನು ಎಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ, ನಂತರ ನಾರಾಯಣಪ್ಪ ಡಾಬಾದಲ್ಲಿ ಇದ್ದ ಚಾಕುವಿನಿಂದ ಲೋಕೇಶನ ಭುಜಕ್ಕೆ ತಿವಿದನು ಲೋಕೇಶನು ಸಹ

ಹೊರಟು ಸ್ವಲ್ಪ ದೂರದಲ್ಲಿ ನಿಂತುಕೊಂಡನು ಎಲ್ಲರೂ ಎರಡು ಫ್ರಿಡ್ಜ್‌ಗಳನ್ನು, ಒಂದು ಐಸ್ ಕ್ರೀಮ್ ಫ್ರಿಡ್ಜ್ ಅನ್ನು, ಒಂದು ಟಿ.ವಿ., ಒಂದು ಟಿ.ವಿ. ಸ್ಟಾಂಡ್, ಮತ್ತು ಒಂದು ಕಬ್ಬಿಣದ ಸ್ಟೌವ್‌ನ್ನು ಟಾಟಾ ಎ.ಸಿ. ವಾಹನಕ್ಕೆ ಲೋಡ್ ಮಾಡಿದರು, ಟಾಟಾ ಎ.ಸಿ, ವಾಹನ ಹೊರಟು ಹೋಯಿತು ನಂತರ ಎಲ್ಲರೂ ಡಾಬಾದ ಬೋರ್ಡ್, ಕೆಲವು ಲೈಟ್‌ಗಳು, ಸಿ.ಸಿ. ಕ್ಯಾಮಾರ ಮತ್ತು ಶೋ ಘಂಟಿಗಳನ್ನು ಹೊಡೆದು ಹಾಕಿದರು, ನಂತರ ರಾಜಪ್ಪ ಎಲ್ಲಿಗೋ ಹೊರಟು ಹೋದನು, ಸ್ವಲ್ಪ ಸಮಯದ ನಂತರ ವಿಜಯ್ ಕುಮಾರ್ ಏನೋ ಸಾಮಾನುಗಳನ್ನು ತೆಗೆದುಕೊಂಡು ಬಂದು ಡಾಬಾದ ಬಳಿ ನಿಂತುಕೊಂಡು ಏನೋ ಮಾತನಾಡುತ್ತಿದ್ದರು ನಾನು ಡಾಬಾ ಖಾಲಿ ಮಾಡುತ್ತಿರಬೇಕು ಎಂದು ತಿಳಿದುಕೊಂಡು ಊರಿಗೆ ಹೋದೆನು ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ, ಸದರಿ ಹೇಳಿಕೆಯನ್ನು ನಿಪಿ-1 ಎಂದು ಗುರುತಿಸಲಾಯಿತು. ಆರೋಪಿತರೊಂದಿಗೆ ಶಾಮೀಲಾಗಿ ನಿಪಿ-1 ರಂತೆ ಹೇಳಿಕೆ ನೀಡಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎಂ.ಪಿ. ವಕೀಲರಿಂದ ಃ**

ಆರೋಪಿತರ ಪರ ವಕೀಲರು ಯಾವುದೇ ಪಾಟೀ-ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರುವಿಚಾರಣೆಃ** ಇಲ್ಲ

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

(ಮೋಹನ ಬಾಡಗಂಡಿ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.